ಶಿಕ್ಷಣದಲ್ಲಿ ಅಗ್ರಪಂಕ್ತಿಯಲ್ಲಿರುವ ದೇಶಗಳಲ್ಲಿ ಶಿಕ್ಷಕರಾಗಬಯಸುವವರು ಆಯ್ಕೆಯಾಗಲು ತೀವ್ರ ಸ್ಪರ್ಧೆಯನ್ನು ಹಾದು ಬರಬೇಕಾಗುತ್ತದೆ. ಅದರಲ್ಲಿ ಯಶಸ್ವಿಯಾಗುವವರು ಶೇ. 10ಕ್ಕಿಂತಲೂ ಕಡಿಮೆ ಜನ. ಆದರೆ, ಭಾರತದಲ್ಲಿ ಪಠ್ಯಕ್ರಮವನ್ನು ಪರಿಷ್ಕರಿಸಿದ ನಂತರವೂ ವ್ಯವಸ್ಥಿತ ರೀತಿಯಲ್ಲಿ ಅನುಷ್ಠಾನ ಕ್ರಮವನ್ನು ಕೈಗೊಳ್ಳದಿರುವುದರಿಂದ ಶಿಕ್ಷಕ ಶಿಕ್ಷಕರ ಸ್ವಾಯತ್ತತೆಗೆ ಸಾಕಷ್ಟು ಪೆಟ್ಟು ಬಿದ್ದಿದೆ.

ಶಿಕ್ಷಕ ಸಿದ್ಧತೆಯಲ್ಲಿನ ಸುಧಾರಣೆಗಳು – ನಾವು ಹಿಂದೆ ಬಿದ್ದಿದ್ದೇವೆಯೇ?

ಈ ಲೇಖನವು ಕರ್ನಾಟಕದಲ್ಲಿ 2014ರಲ್ಲಿ ಸೇವಾಪೂರ್ವ ಶಿಕ್ಷಕ ಶಿಕ್ಷಣದಲ್ಲಿ ಸುಧಾರಣೆಗಳನ್ನು ತಂದ ನಂತರದ ಸನ್ನಿವೇಶವನ್ನು ಪರಾಮರ್ಶಿಸುವ ಪ್ರಯತ್ನ ಮಾಡುತ್ತದೆ.

2014ರ ಸೇವಾಪೂರ್ವ ಶಿಕ್ಷಕ–ಶಿಕ್ಷಣ ಕಾರ್ಯಕ್ರಮದಲ್ಲಿನ ಸುಧಾರಣೆಗಳ ಆಶಯ

2014ರಲ್ಲಿ ಸೇವಾಪೂರ್ವ ಶಿಕ್ಷಕ ಸಿದ್ಧತೆ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ರಾಷ್ಟ್ರೀಯ ಸಂಸ್ಥೆಯಾದ, ಶಿಕ್ಷಕ ಶಿಕ್ಷಣವನ್ನು ಕುರಿತಾದ ರಾಷ್ಟ್ರೀಯ ಮಂಡಳಿ(ಎನ್‌ಸಿಟಿಇ)ಯು ತುಂಬಾ ಅಗತ್ಯವಾಗಿದ್ದ ಸುಧಾರಣೆಗಳನ್ನು ತಂದಿದ್ದರಿಂದಾಗಿ, ಈ ಕಾರ್ಯಕ್ರಮಗಳು ಸಾಕಷ್ಟು ಚಾಲನೆಯನ್ನು ಪಡೆದವು. ಈ ಮೂಲಕ ತರಲಾದ ಕೆಲವು ಮುಖ್ಯ ಬದಲಾವಣೆಗಳು ಹೀಗಿವೆ: ಬಿಎಡ್ ಮತ್ತು ಎಮ್‌ಎಡ್‌ಗಳಂತಹ ಕಾರ್ಯಕ್ರಮಗಳ ಅವಧಿಯನ್ನು ಒಂದು ವರ್ಷದಿಂದ ಎರಡು ವರ್ಷಕ್ಕೆ ಹೆಚ್ಚಿಸಲಾಗಿದೆ. ನಾಲ್ಕು ವರ್ಷ ಅವಧಿಯ ಸಂಯೋಜಿತ ಬಿಎಸ್ಸಿ.ಎಡ್ ಹಾಗೂ ಬಿಎ.ಎಡ್ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ. ಅಗತ್ಯವಿರುವ ವೃತ್ತಿಪರ ಕೋರ್ಸ್‌ಗಳ ಮೂಲಕ ತಮ್ಮ ಕೌಶಲ, ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ತರಬೇತಿ ಹೊಂದಿಲ್ಲದ ಸಾವಿರಾರು ಶಿಕ್ಷಕರಿಗೆ ಅನುಕೂಲವನ್ನು

ಕಲ್ಪಿಸಿಕೊಡಲಾಗಿದೆ ಹಾಗೂ ದೂರಶಿಕ್ಷಣ ವಿಧಾನದ ಮೂಲಕ ಪಡೆಯಲಾಗುತ್ತಿದ್ದ ಎಮ್‌ಎಡ್ ಕೋರ್ಸ್‌ನ್ನು ತೆಗೆದುಹಾಕಲಾಗಿದೆ.

ಶಿಕ್ಷಕ ಶಿಕ್ಷಣವನ್ನು ಕುರಿತಾದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2009ರ ಆಶೋತ್ತರಗಳನ್ನು ಸಾಕಾರಗೊಳಿಸಲು ತರಲಾದ ಈ ದೂರಗಾಮಿ ಸುಧಾರಣೆಗಳಿಂದ ಬಹಳಷ್ಟನ್ನು ನಿರೀಕ್ಷಿಸಲಾಗಿತ್ತು. ಇದು ಉತ್ತಮ ಗುಣಮಟ್ಟದ ಶಿಕ್ಷಕರ ಹಾಗೂ ಶಿಕ್ಷಕ ಶಿಕ್ಷಕರ ಸಿದ್ಧತೆಗೆ ಎಡೆಮಾಡಿಕೊಡುತ್ತದೆ ಎಂಬ ನಿರೀಕ್ಷೆ ಇತ್ತು. ಮುಂದೆ ಶಿಕ್ಷಕರಾಗಲಿರುವವರಿಗೆ ಹಾಗೂ ಶಿಕ್ಷಕ ಶಿಕ್ಷಕರಾಗುವವರಿಗೆ ತಮ್ಮ ವೃತ್ತಿಪರ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು, ಬೋಧನೆಗೆ ಸಂಬಂಧಿಸಿದಂತೆ ಕೌಶಲವನ್ನು ವೃದ್ಧಿಸಿಕೊಳ್ಳಲು, ಶಿಕ್ಷಣದಲ್ಲಿ ಸಂಶೋಧನಾ ಕಾರ್ಯವನ್ನು ಕೈಗೊಳ್ಳಲು ಹಾಗೂ ಶೈಕ್ಷಣಿಕ ಸಂಗತಿಗಳ ಯೋಜನೆ ಮತ್ತು ನಿರ್ವಹಣೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಅನುಕೂಲವಾಗುವ ಹಾಗೆ ಸೂಕ್ತ ಅವಕಾಶವನ್ನು ಒದಗಿಸಲು ಕಾರ್ಯಕ್ರಮದ ಅವಧಿಯನ್ನು ಹೆಚ್ಚಿಸಲಾಗಿತ್ತು.

ಶಿಕ್ಷಕ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರಸ್ತುತ ಸನ್ನಿವೇಶ

ಇತ್ತೀಚೆಗೆ, ಬೆಂಗಳೂರು ಮತ್ತು ಅದರ ಸುತ್ತಲೂ ಇರುವ ಕೆಲವು ಖ್ಯಾತ ಖಾಸಗಿ ಶಿಕ್ಷಕ ಶಿಕ್ಷಣ ಸಂಸ್ಥೆಗಳಿಗೆ ಸೇರಿದ ಅನುಭವಿ ಶಿಕ್ಷಕ ಶಿಕ್ಷಕರ ಚಿಕ್ಕ ಗುಂಪೊಂದರ ಜೊತೆ ಅನೌಪಚಾರಿಕ ಚರ್ಚೆಯಲ್ಲಿ ತೊಡಗಲು ನನಗೆ ಅವಕಾಶ ಒದಗಿತ್ತು. ಎರಡು ವರ್ಷಗಳ ಅವಧಿಯ ಪುನರುಜ್ಜೀವಿತ ಬಿಎಡ್ ಕಾರ್ಯಕ್ರಮವು ಎಷ್ಟು ಕೆಟ್ಟದಾಗಿ ಅನುಷ್ಠಾನಗೊಂಡಿದೆ ಎಂಬುದರ ತ್ವರಿತ ನೋಟವೊಂದು ಈ ಮಾತುಕತೆಯಲ್ಲಿ ನನಗೆ ದೊರಕಿತು. ನಾನು ಚರ್ಚೆಯಲ್ಲಿ ತೊಡಗಿದ್ದ ಶಿಕ್ಷಕ ಶಿಕ್ಷಕರು ಕೇವಲ ಆತ್ಮಸಾಕ್ಷಿಗನುಗುಣವಾಗಿ ಕೆಲಸ ಮಾಡುವವರಷ್ಟೇ ಆಗಿರಲಿಲ್ಲ, ಅವರ ಉದ್ದೇಶವೂ ಘನವಾಗಿತ್ತು. ಆದ್ದರಿಂದ ಅವರು ಹೇಳಿದ್ದು ಹೆಚ್ಚು ಮುಖ್ಯವಾಗುತ್ತದೆ. 2014ರಲ್ಲಿ ತರಲಾದ ಬದಲಾವಣೆಗಳಿಗೂ ಮೊದಲು ಕೆಲ ವರ್ಷಗಳಷ್ಟು ಹಿಂದೆಯೇ ಪರ್ಯಾಯ ಬಿಎಡ್ ಪಠ್ಯಕ್ರಮವೊಂದನ್ನು ಪ್ರಾಯೋಗಿಕ ರೂಪದಲ್ಲಿ ತರಲಾಗಿತ್ತು. ಅದರ ಅನುಷ್ಠಾನದ ಅನುಭವವು ಈ ಗುಂಪಿನ ಕೆಲವರಿಗಿತ್ತು.

ಅವರು ಉಲ್ಲೇಖಿಸಿದವುಗಳಲ್ಲಿ ಕೆಲವು ಸಂಗತಿಗಳು ಬಹಳ ಚಿಂತೆಗೆ ಈಡು ಮಾಡುತ್ತವೆ.

ಬಿಎಡ್ ಕಾರ್ಯಕ್ರಮಕ್ಕೆ ದಾಖಲಾತಿ ಪಡೆಯಲು ಪದವಿ ಮಟ್ಟದಲ್ಲಿ ಕನಿಷ್ಠ ಶೇ. 50 ಅಂಕಗಳನ್ನು ಪಡೆದಿರಬೇಕು ಎನ್ನುವ ಅರ್ಹತಾ ಮಾನದಂಡವು ಭಾವಿ

ವಿದ್ಯಾರ್ಥಿಗಳನ್ನು ಆಕರ್ಷಿಸುವುದಿಲ್ಲ ಎಂಬ ಭಯದಿಂದ, ಹಲವಾರು ಸಂಸ್ಥೆಗಳು ಅದನ್ನು ಅನುಕೂಲಕರವಾಗಿ ಗಾಳಿಗೆ ತೂರಿಬಿಟ್ಟಿವೆ. ಸಾಕಷ್ಟು ಹೆಸರುವಾಸಿಯಾದ ಸಿಇಟಿಯನ್ನಂತೂ ಈಗ ತಪ್ಪಿಸಿಕೊಂಡಾಗಿದೆ.

ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗಗಳಲ್ಲಿಯೂ ಕೂಡ ಸಾಕಷ್ಟು ಸಂಖ್ಯೆಯ ಶಿಕ್ಷಕ ಶಿಕ್ಷಕ ಹುದ್ದೆಗಳು ವರ್ಷಗಳಿಂದ ಖಾಲಿ ಬಿದ್ದಿವೆ ಹಾಗೂ ಈಗ ಸದ್ಯಕ್ಕೆ ಪಾಠ ಮಾಡುತ್ತಿರುವವರೂ ಅಲ್ಪಾವಧಿ ಅತಿಥಿ ಬೋಧಕರಾಗಿದ್ದು ಅವರು ಹೆಚ್ಚಿನ ವೇಳೆ ಅನುಮಾನಾಸ್ಪದ ಆಯ್ಕೆ ವಿಧಾನಗಳ ಮೂಲಕ ಪ್ರವೇಶ ಪಡೆದಿರುತ್ತಾರೆ.

ವಾಣಿಜ್ಯದಂತಹ ಹೊಸ ವಿಷಯಗಳಿಗೆ ಸಂಬಂಧಿಸಿದಂತೆ ಅರ್ಹ ಶಿಕ್ಷಕ ಶಿಕ್ಷಕರ ಕೊರತೆಯಿರುವುದರಿಂದ ಬೋಧಕವರ್ಗದಲ್ಲಿಯೇ ಯಾರಾದರೊಬ್ಬರು ಅಷ್ಟೇನೂ ವಿಷಯದ ಹಿನ್ನೆಲೆ ಇಲ್ಲದವರು ತರಗತಿಕೋಣೆಯಲ್ಲಿ ಒಂದಿಷ್ಟು ಸ್ಲೈಡ್‌ಗಳನ್ನು ತೋರಿಸುವ, ಟಿಪ್ಪಣಿಗಳನ್ನು ಕೊಡುವ ಕೆಲಸ ಮಾಡಬೇಕಾಗುತ್ತದೆ. ಉಳಿದುದನ್ನು ಸಂಬಂಧಿಸಿದ ವಿದ್ಯಾರ್ಥಿಗಳು ತಾವೇ ಮಾಡಿಕೊಳ್ಳಬೇಕಾಗುತ್ತದೆ.

ಪರಿಷ್ಕೃತ ಪಠ್ಯಕ್ರಮವನ್ನು ಕಾರ್ಯಗತಗೊಳಿಸುವ ವಿಧಾನದಲ್ಲೇನೂ ಬದಲಾವಣೆಯಾಗಲಿಲ್ಲ. ವಿದ್ಯಾರ್ಥಿ–ಶಿಕ್ಷಕರು ಜ್ಞಾನವನ್ನು ತಾವೇ ಶೋಧಿಸಿ, ಪಡೆದುಕೊಳ್ಳುವುದನ್ನು ಉತ್ತೇಜಿಸುವುದರ ಬದಲಾಗಿ, ಉಪನ್ಯಾಸ ಮಾದರಿಯ ಅದೇ ಹಳೆಯ ವಿಧಾನವನ್ನು ಅನುಸರಿಸಲಾಗುತ್ತಿದೆ.

ಪಠ್ಯಕ್ರಮ ಬದಲಾವಣೆಯ ನಂತರದಲ್ಲಿ ಶಿಕ್ಷಕ ಶಿಕ್ಷಕರಿಗಾಗಿ ಅವರ ಸಂಸ್ಥೆಗಳಾಗಲಿ ಅಥವಾ ವಿಶ್ವವಿದ್ಯಾಲಯವಾಗಲಿ ಸಾಮರ್ಥ್ಯಾಭಿವೃದ್ಧಿ ಕಾರ್ಯಾಗಾರಗಳನ್ನು ಆಯೋಜಿಸಲೇ ಇಲ್ಲ. ಅವರು ಬೇರೆ ಶಿಕ್ಷಕ ಶಿಕ್ಷಕರೊಡನೆ ಹೊಸ ಸಿಲೆಬಸ್ ಅನ್ನು ಕಾರ್ಯಗತಗೊಳಿಸುವ ಕುರಿತು ಅರ್ಥಪೂರ್ಣ ಚರ್ಚೆಯಲ್ಲಿ ತೊಡಗಲೂ ಇಲ್ಲ. ಶಿಕ್ಷಕ ಶಿಕ್ಷಕರಲ್ಲಿ ಹೆಚ್ಚಿನವರು ತಾವೇನು ಮಾಡುತ್ತಿದ್ದಾರೋ ಅದರಲ್ಲಿಯೇ ತೃಪ್ತರಾಗಿರುವುದು ಒಳ್ಳೆಯ ಸೂಚನೆಯಲ್ಲ.

ಸಂಸ್ಥೆಗಳು ತಮ್ಮಲ್ಲಿನ ವಿದ್ಯಾರ್ಥಿಗಳನ್ನು ಅವರವರ ವೃತ್ತಿಯಲ್ಲಿ ಚೆನ್ನಾಗಿ ಕಾರ್ಯನಿರ್ವಹಿಸಲು ಬೇಕಾದಂತೆ ತಯಾರು ಮಾಡುವ ಬದಲಾಗಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿಸಬೇಕೆಂಬುದರ ಕುರಿತು ಹೆಚ್ಚು ಕಾಳಜಿ ಹೊಂದಿವೆ. ಯಾವುದೇ ಶಿಕ್ಷಕ ಶಿಕ್ಷಕರು ನವೀನವಾದುದೇನನ್ನಾದರೂ ತರುವ ಉದ್ದೇಶದಿಂದ ಯಾವುದೇ ಅಸಾಂಪ್ರದಾಯಿಕ ಪ್ರಯತ್ನವನ್ನು ಮಾಡಿದರೂ ಅದನ್ನು ಅನಗತ್ಯವೆಂದು ಪರಿಗಣಿಸಿ ಹತ್ತಿಕ್ಕಲಾಗುತ್ತದೆ.

ಬೋಧನಾ ಅಭ್ಯಾಸದ ವಿಸ್ತೃತ ಭಾಗಗಳನ್ನು (ಮೊದಲನೆಯ ವರ್ಷ ನಾಲ್ಕು ವಾರಗಳು ಮತ್ತು ಎರಡನೆಯ ವರ್ಷ ಹದಿನಾರು ವಾರಗಳು) ಇನ್ನಷ್ಟು ಸಮೃದ್ಧಗೊಳಿಸುವ ದೊಡ್ಡದೊಂದು ಅವಕಾಶವನ್ನು ಕಳೆದುಕೊಂಡಾಗಿದೆ.

ಇದನ್ನು ಉತ್ತಮಗೊಳಿಸುವುದು ಹೇಗೆ ಎನ್ನುವುದರ ಕುರಿತು ಚಿಂತನೆಗಳು ನಡೆಯಬೇಕಿದೆ.

ರಾಜ್ಯದ ಉನ್ನತ ಶಿಕ್ಷಣ ಇಲಾಖೆಯಾಗಲಿ ವಿಶ್ವವಿದ್ಯಾಲಯವಾಗಲಿ ಪರಿಷ್ಕೃತ ಪಠ್ಯಕ್ರಮದ ಅಗತ್ಯ ಸ್ವರೂಪಗಳನ್ನು ಕುರಿತಂತೆ ಒಂದು ಸಾಮಾನ್ಯ ತಿಳುವಳಿಕೆಯನ್ನು ರೂಪಿಸಬೇಕಿದೆ. ಎಲ್ಲಾ ಸರ್ಕಾರಿ ವಿಶ್ವವಿದ್ಯಾಲಯ/ಸಂಸ್ಥೆಗಳನ್ನು ಅವು ಎದುರಿಸುತ್ತಿರುವ ಪ್ರಾಯೋಗಿಕ ಸವಾಲುಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಒಂದೆಡೆ ಸೇರಿಸುವ ಉಪಕ್ರಮಕ್ಕೆ ಮುಂದಾಗಬೇಕಿದೆ.

ಡಿಎಡ್ ಸಂಸ್ಥೆಗಳಲ್ಲಿಯೂ ಸನ್ನಿವೇಶವು ಸಾಕಷ್ಟು ನಿರಾಶಾದಾಯಕವಾಗಿಯೇ ಇದೆ. ಅಭ್ಯರ್ಥಿಗಳೇ ಇಲ್ಲದೆ ಅವುಗಳಲ್ಲಿ ಬಹಳಷ್ಟನ್ನು ಮುಚ್ಚಲಾಗಿದೆ. ಹಿರಿಯ ಪ್ರಾಥಮಿಕ ತರಗತಿಗಳಲ್ಲಿ ಪಾಠ ಮಾಡಲು ಪದವಿಯ ಜೊತೆಗೆ ಡಿಎಡ್ ಹೊಂದಿರಬೇಕೆಂಬ ಕನಿಷ್ಠ ಮಾನದಂಡವನ್ನು ರಾಜ್ಯ ಸರ್ಕಾರವು ಕಡ್ಡಾಯಗೊಳಿಸಿದೆ. ಆದರೆ, ಎಲ್ಲಾ ತರಹದ ಶಾಲೆಗಳಲ್ಲಿಯೂ ಸಿಬಿಎಸ್‌ಸಿ ಮಂಡಳಿಯವರು ಅನುಸರಿಸುವ ಸಾಮಾನ್ಯ ಪಠ್ಯಕ್ರಮವನ್ನು ಆರಂಭಿಸುವುದಕ್ಕೆ ಶಿಕ್ಷಕರು ಬಿಎಡ್‌ನಂತಹ ಉನ್ನತ ಶೈಕ್ಷಣಿಕ ಅರ್ಹತೆಯನ್ನು ಪಡೆದುಕೊಳ್ಳುವ ಅಗತ್ಯವಿದೆ. ಆದ್ದರಿಂದ ಡಿಎಡ್ ಬೋಧಕ ವರ್ಗದ ಪಾತ್ರವನ್ನು ವಿಶೇಷವಾಗಿ ಡಯಟ್‌ಗಳಲ್ಲಿ ಪುನರಾವಲೋಕಿಸುವ ಅಗತ್ಯವಿದೆ.

ದೀರ್ಘಕಾಲೀನ ಪರಿಣಾಮ

ಈ ಸಾಮೂಹಿಕ ಅನಿರ್ಣಾಯಕತೆಯು ಬದ್ಧತೆಯುಳ್ಳ ಶಿಕ್ಷಕ ಶಿಕ್ಷಕರ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರಿದೆ. ಅವರ ಕರ್ತೃತ್ವ ಶಕ್ತಿ ಮತ್ತು ಸ್ವಾಯತ್ತತೆಗಳಿಗೆ ಸಾಕಷ್ಟು ಪೆಟ್ಟು ತಗುಲಿದೆ. ಅವರಿಗೆ ತಾವು ಎಂತಹ ಶಿಕ್ಷಕರನ್ನು ತಯಾರಿಸಿ ಕಳುಹಿಸುತ್ತಿದ್ದೇವೆ ಎಂಬ ಭಯವೂ ಇದೆ. ಹಾಗೆ ಹೊರಬರುವ ಶಿಕ್ಷಕರು ಖಂಡಿತವಾಗಿಯೂ ತಮ್ಮ ಭಾವಿ ತರಗತಿಕೋಣೆಯ ಸವಾಲುಗಳನ್ನು ನಿಭಾಯಿಸಲು ಸುಸಜ್ಜಿತರಾಗುವುದಿಲ್ಲ ಎಂಬ ಇಂಗಿತವಿದೆ. ಈ ಕಳಪೆ ಗುಣಮಟ್ಟದ ಶಿಕ್ಷಕರ ಕೃಪೆಯಲ್ಲಿ ಕಲಿಯಬೇಕಾದ ಭವಿಷ್ಯದ ಬಡಪಾಯಿ ವಿದ್ಯಾರ್ಥಿಗಳ ಮೇಲೆ ಇದು ನೇರವಾಗಿ ಪರಿಣಾಮ ಬೀರುತ್ತದೆ.

ಪ್ರಗತಿಪರ ರಾಷ್ಟ್ರಗಳಲ್ಲಿ ಶಿಕ್ಷಕ ಶಿಕ್ಷಣ ವ್ಯವಸ್ಥೆ

ಭಾರತವು ಶಿಕ್ಷಕ ಶಿಕ್ಷಣ ವಿಷಯದಲ್ಲಿನ ಗುಣಮಟ್ಟದ ಸಮಸ್ಯೆಗಳನ್ನು ಪರಿಹರಿಸಲು ಕಷ್ಟಪಟ್ಟು ಹೆಣಗಾಡುತ್ತಿದೆ. ಈ ಹೊತ್ತಿನಲ್ಲಿ, ಶಿಕ್ಷಕ ಸಿದ್ಧತೆ ಕಾರ್ಯಕ್ರಮಗಳ ಗುಣಮಟ್ಟ ಮತ್ತು ಅವಧಿಗೆ ಸಂಬಂಧಿಸಿದಂತೆ ಶಿಕ್ಷಣದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಕೆಲವು ರಾಷ್ಟ್ರಗಳ ಜೊತೆಗೆ ಇದನ್ನು ಹೋಲಿಸುವುದು ಕುತೂಹಲಕರವಾಗಿದೆ. ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಕುರಿತಾದ ಸಂಸ್ಥೆ(ಓಇಸಿಡಿ)ಯು ವಿಜ್ಞಾನಕ್ಕೆ ಸಂಬಂಧಿಸಿದಂತೆ ನಡೆಸುವ ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಮೌಲ್ಯಮಾಪನ ಕಾರ್ಯಕ್ರಮ (ಪಿಐಎಸ್ಎ)ವು ಒದಗಿಸುವ ಶ್ರೇಯಾಂಕದ ಪ್ರಕಾರ ಕೆನಡಾ ದೇಶವು ಇತ್ತೀಚೆಗೆ ಅಗ್ರಪಂಕ್ತಿಯಲ್ಲಿದೆ. ಕೆನಡಾ, ಫಿನ್ಲೆಂಡ್, ಸಿಂಗಪುರ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳೆಲ್ಲೆಡೆ ಸೀನಿಯರ್ ಸೆಕೆಂಡರಿ ಮಟ್ಟದ (ಪದವಿಪೂರ್ವ ಎರಡು ವರ್ಷಗಳಿಗೆ ಸಮನಾದದ್ದು) ನಂತರ ಸುಮಾರು ಐದು ವರ್ಷಗಳನ್ನು ಶಿಕ್ಷಕ ಸಿದ್ಧತೆ ಕಾರ್ಯಕ್ರಮಕ್ಕಾಗಿ ನಿಗದಿಪಡಿಸಲಾಗಿದೆ. ಶಿಕ್ಷಕರಾಗುವ ಇಚ್ಛೆಯುಳ್ಳವರು ಉದ್ದೇಶಿತ ಕಾರ್ಯಕ್ರಮಗಳಿಗೆ ಆಯ್ಕೆಯಾಗಲು ತೀವ್ರ ಸ್ಪರ್ಧೆಯನ್ನು ಹಾದು ಬರಬೇಕಾಗುತ್ತದೆ. ಅದರಲ್ಲಿ ಯಶಸ್ವಿಯಾಗುವವರು ಶೇ. 10ಕ್ಕಿಂತಲೂ ಕಡಿಮೆ ಜನ.

ಫಿನ್ಲೆಂಡ್ ದೇಶವು ತನ್ನ ಶಿಕ್ಷಕರಿಗೆ ತರಗತಿಯಲ್ಲಿ ಯಾವ ವಿಧಾನವನ್ನು ಬಳಸಬೇಕು ಎನ್ನುವ ವಿಷಯದಲ್ಲಿ ಹಾಗೂ ಸಂಶೋಧನೆಯನ್ನು ಆಧರಿಸಿದ ರೀತಿಯಲ್ಲಿ ಬೋಧನಾಕ್ರಮಕ್ಕೆ ಸಂಬಂಧಿಸಿದ ನಿರ್ಣಯಗಳನ್ನು ತೆಗೆದುಕೊಳ್ಳುವುದರಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಸ್ವಾಯತ್ತತೆಯನ್ನು ನೀಡುತ್ತದೆ. ತಪಾಸಣೆ, ಪರೀಕ್ಷೆ, ಪರಿಶೀಲನೆಗಳಂತಹ ಬಾಹ್ಯ ಅಗತ್ಯಗಳು ಮತ್ತು ಸರ್ಕಾರಿ ನಿಯಂತ್ರಣಗಳ ತೊಂದರೆಯಿಲ್ಲದ ಕಾರಣ ಶಿಕ್ಷಕರು ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಾರೆ. ಕೆನಡಾ ಕೂಡ ತನ್ನ ಶಿಕ್ಷಕರನ್ನು ಚೆನ್ನಾಗಿ ನಡೆಸಿಕೊಳ್ಳುತ್ತದೆ. ಅಲ್ಲಿನ ಜನಸಂಖ್ಯೆಯಲ್ಲಿ ವಿವಿಧ ರೀತಿಯ ವಲಸಿಗರ ಪ್ರಮಾಣವು ಹೆಚ್ಚೇ ಇದೆ. ಆದರೂ ವಂಚಿತ ಮತ್ತು ವಂಚಿತರಲ್ಲದ ವಿದ್ಯಾರ್ಥಿಗಳ ಗುಂಪಿನಲ್ಲಿ ನ್ಯಾಯ ಮತ್ತು ಸಮತೆಯನ್ನು ಸಾಧಿಸುವಲ್ಲಿ ಕೆನಡಾ ಯಶಸ್ವಿಯಾಗಿದೆ. ಸಿಂಗಪುರದ ಮುಖ್ಯ ಶಿಕ್ಷಕ ಶಿಕ್ಷಣ ಸಂಸ್ಥೆಯಾದ ರಾಷ್ಟ್ರೀಯ ಶಿಕ್ಷಣ ಸಂಸ್ಥೆ(ಎನ್ಐಇ)ಯು ಸೇವಾನಿರತ ಶಿಕ್ಷಕರಿಗೆ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮದ ಜೊತೆಗೆ ಪ್ರಾಂಶುಪಾಲರು, ಇಲಾಖಾ ಮುಖ್ಯಸ್ಥರು ಹಾಗೂ ಇನ್ನಿತರ ಶೈಕ್ಷಣಿಕ ಮುಂದಾಳುಗಳಿಗೆ ಕಾರ್ಯ ನಿರ್ವಾಹಕ ಮುಂದಾಳತ್ವ ಕಾರ್ಯಕ್ರಮಗಳೂ ಸೇರಿದಂತೆ ಎಲ್ಲಾ ಮಟ್ಟದ ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳನ್ನು ನೀಡುತ್ತದೆ. ಅಮೆರಿಕದಲ್ಲಿ ವಿದ್ಯಾರ್ಥಿ–ಶಿಕ್ಷಕರಿಗೆ

ಸದೃಢವಾದ ಬೋಧನಾ ಅಭ್ಯಾಸದ ಘಟಕಗಳಿವೆ. ಜೊತೆಗೆ ಕ್ಷೇತ್ರ ಬೆಂಬಲ ಹಾಗೂ ಮಾರ್ಗದರ್ಶನದ ವ್ಯವಸ್ಥೆಯೂ ಸರಾಗವಾಗಿ ನಡೆಯುತ್ತದೆ. ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗ ಮತ್ತು ವಿದ್ಯಾರ್ಥಿಗಳು ಭೇಟಿ ನೀಡುವ ಶಾಲೆಗಳ ನಡುವೆ ಬಲವಾದ ಸಹಯೋಗವಿದೆ ಹಾಗೂ ವಿದ್ಯಾರ್ಥಿ–ಶಿಕ್ಷಕರು ತಮ್ಮ ಆಚರಣೆಗಳನ್ನು ಹರಿತಗೊಳಿಸಿಕೊಳ್ಳಲು ನೆರವಾಗುವಂತಹ ಪರ್ಯಾಲೋಚಕ ಹಿಮ್ಮಾಹಿತಿಯ ವ್ಯವಸ್ಥೆ ಇದೆ.

ಮುಂದಿರುವ ಪ್ರಯಾಸಕರ ಪಯಣ

ಹೊಸದಾಗಿ ಸೇರಿರುವ ಅನುಭವರಹಿತ ವಿದ್ಯಾರ್ಥಿ–ಶಿಕ್ಷಕರನ್ನು ಸಮರ್ಥ ಶಿಕ್ಷಕರನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯು ಒಂದು ಕಠಿಣ ಹಾಗೂ ಸುದೀರ್ಘವಾದ ಪಯಣ. ತರಗತಿಕೋಣೆಯ ಅವಲೋಕನ, ವಿವಿಧ ಶಾಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ, ವಿದ್ಯಾರ್ಥಿಗಳ ಸಾಮಾಜಿಕ ಪರಿಸರವನ್ನು ಅರ್ಥಮಾಡಿಕೊಳ್ಳುವುದು ಹಾಗೂ ಅವರ ಪಾಲಕರೊಂದಿಗೆ ಸಂವಹಿಸುವುದು, ಅನುಭವಿ ಶಿಕ್ಷಕರಡಿ ತರಬೇತಿ ಪಡೆಯುತ್ತ ಕಲಿಯುವುದು ಹಾಗೂ ಅವರ ಬೆಂಬಲದೊಂದಿಗೆ ಪ್ರತ್ಯೇಕ ತರಗತಿಗಳನ್ನು ತೆಗೆದುಕೊಳ್ಳುವುದು – ಇವು ವಿದ್ಯಾರ್ಥಿ–ಶಿಕ್ಷಕರು ಬಹುಶಃ ಹಾದುಹೋಗಬೇಕಾದ, ಪರಸ್ಪರ ಸಂಬಂಧವಿರುವ ಹಲವಾರು ಪ್ರಕ್ರಿಯೆಗಳಲ್ಲಿ ಕೆಲವು. ಈ ರೀತಿಯಾಗಿ, ಅವರು ಸ್ವತಂತ್ರ ವೃತ್ತಿಪರರಾಗಿ ವಿಕಸನಗೊಳ್ಳುತ್ತಾರೆ.

ಇತ್ತೀಚೆಗೆ ಶಾಲಾ ಶಿಕ್ಷಣ ಇಲಾಖೆಯು ಸೇವಾನಿರತ ಶಿಕ್ಷಕ ಶಿಕ್ಷಣದಲ್ಲಿ ಸುಧಾರಣೆಗಳನ್ನು ತರುವ ಸಂದರ್ಭದಲ್ಲಿ ಕಂಡುಬಂದ ಹಾಗೆ, ಸೇವಾಪೂರ್ವ ಕ್ಷೇತ್ರದಲ್ಲಿ ಇಂತಹ ಬದಲಾವಣೆಗಳನ್ನು ದೊಡ್ಡ ಪ್ರಮಾಣದಲ್ಲಿ ತರಲು ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಮತ್ತು ಮಂಡಳಿಗಳು ಸ್ಪಷ್ಟ ಉದ್ದೇಶ ಮತ್ತು ಬದ್ಧತೆಯನ್ನು ಹೊಂದಿರಬೇಕು, ವ್ಯವಸ್ಥಿತ ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ಬದಲಾವಣೆಗಳನ್ನು ಜಾರಿಗೊಳಿಸಲು ಸುಸಂಘಟಿತ ಕಾರ್ಯತಂತ್ರ, ಆಯೋಜನಾ ಸಾಮರ್ಥ್ಯ ಮತ್ತು ಸಂಪನ್ಮೂಲಗಳ ಗರಿಷ್ಠ ಬಳಕೆಯ ಅಗತ್ಯವಿದೆ. ಪ್ರಕ್ರಿಯೆಯ ಪ್ರತೀ ಹಂತದಲ್ಲಿಯೂ ನಿರಂತರ ಬೆಂಬಲ ಹಾಗೂ ಅನುಪಾಲನೆಯ ಕಾರ್ಯವನ್ನು ಕೈಗೊಳ್ಳಬೇಕಿದೆ.

ಸನ್ನಿವೇಶವನ್ನು ಸುಧಾರಿಸಲು ಇರುವ ಕೆಲವು ಮಾರ್ಗಗಳು

ಸನ್ನಿವೇಶವು ಸಮಾಧಾನಕರವಾಗಿ ಇಲ್ಲದಿದ್ದರೂ ಅದನ್ನು ಸುಧಾರಿಸಲು ಆಗದು ಎಂದೇನಿಲ್ಲ. ಉನ್ನತ ಶಿಕ್ಷಣ ಇಲಾಖೆ ಅಥವಾ ಮಂಡಳಿಯು

ಮಾಡಬೇಕಾದ ಮೊತ್ತಮೊದಲ ಕೆಲಸವೆಂದರೆ, ಚರ್ಚೆ–ಸಂವಾದಗಳ ಮೂಲಕ ಮುಖ್ಯ ಅಂಶಗಳನ್ನು ನಿರ್ಧರಿಸುವುದಕ್ಕಾಗಿ, ಪ್ರಸ್ತುತವಾದ ಎಲ್ಲ ವಿಶ್ವವಿದ್ಯಾಲಯಗಳು/ ಸಂಸ್ಥೆಗಳು/ ತಜ್ಞರನ್ನು ಒಂದೆಡೆ ಸೇರಿಸುವುದು.

ಶಿಕ್ಷಕ ಶಿಕ್ಷಣವನ್ನು ಕುರಿತಂತೆ ಒಂದಾದ ಮೇಲೊಂದರಂತೆ ನೇಮಿಸಲಾದ ಜಂಟಿ ಪರಿಶೀಲನಾ ನಿಯೋಗ(ಜೆಆರ್ಎಂ)ಗಳು ಗಮನಿಸಿದಂತೆ, ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳು ಮತ್ತು ಡಯಟ್ ಬೋಧಕ ವರ್ಗದ ಜೊತೆಗೆ ಸೇರಿಕೊಂಡು ವಿಶ್ವವಿದ್ಯಾಲಯಗಳೊಂದಿಗೆ ವಿವರವಾದ ಚರ್ಚೆಗಳನ್ನು ನಡೆಸುವ, ಪಠ್ಯಕ್ರಮಗಳನ್ನು ಅರ್ಥಮಾಡಿಕೊಳ್ಳುವ ಹಾಗೂ ಸಂಪನ್ಮೂಲ ಸಾಮಗ್ರಿಗಳನ್ನು ತಯಾರಿಸುವ ನಿಟ್ಟಿನಲ್ಲಿ ಡಿಎಸ್ಇಆರ್ಟಿ ಸಂಸ್ಥೆಯು ಸಬಲವಾಗಬೇಕಿದೆ. ಬೋಧಕವರ್ಗಕ್ಕೆ ಇಂದಿನ ಜ್ಞಾನಸಿದ್ಧಾಂತಗಳು, ಕಲಿಕೆ ಮತ್ತು ಸಂಶೋಧನೆಯ ಹಿನ್ನೆಲೆಯಲ್ಲಿ ತಮ್ಮ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಅವಕಾಶವನ್ನು ಒದಗಿಸಿಕೊಡಬೇಕಿದೆ. ಇದರಿಂದ ಅವರು ಶೈಕ್ಷಣಿಕ ಸಂಗತಿಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಹಾಗೂ ಉತ್ತಮ ಗುಣಮಟ್ಟದ ಸಂಪನ್ಮೂಲಗಳನ್ನು ವಿಶೇಷವಾಗಿ ಕನ್ನಡದಂತಹ ಸ್ಥಳೀಯ ಭಾಷೆಗಳಲ್ಲಿ ಸಿದ್ಧಪಡಿಸಲು ಅಗಾಧವಾದ ನೆರವು ಸಿಗುತ್ತದೆ. ನಲಿ–ಕಲಿಯಂತಹ ಉತ್ತಮ ಆಚರಣೆಗಳು ಹಾಗೂ ಶಿಕ್ಷಕರ ಬೋಧನಾ ವಿಧಾನಗಳು, ತಜ್ಞರ ಒಳನೋಟಗಳು ಇತ್ಯಾದಿಗಳನ್ನು ಅವುಗಳ ವಿದ್ಯುನ್ಮಾನ ರೂಪವೂ ಸೇರಿದಂತೆ ಸಂಪನ್ಮೂಲಗಳ ಭಾಗವನ್ನಾಗಿ ಮಾಡಬೇಕು.

ಸೇವಾಪೂರ್ವ ಹಾಗೂ ಸೇವಾನಿರತ ಶಿಕ್ಷಣಗಳೆರಡನ್ನೂ ಸಮ್ಮಿಳಿತಗೊಳಿಸಿ ನಿರಂತರ ವೃತ್ತಿಪರ ಅಭಿವೃದ್ಧಿಯು ನಡೆಯುವಂತೆ ನೋಡಿಕೊಳ್ಳಲು ಸಾಮರ್ಥ್ಯ ನಿರ್ಮಾಣದ ಪರಿಕಲ್ಪನೆಯನ್ನು ಮರುರೂಪಿಸುವ ಅಗತ್ಯವಿದೆ. ಇಲಾಖೆಯು ಕರ್ನಾಟಕದಲ್ಲಿ ಮುಂಚೂಣಿಯಲ್ಲಿರುವ ಸಂಸ್ಥೆಗಳ ಬೆಂಬಲವನ್ನು ಪಡೆಯಬಹುದು.

ಶಿಕ್ಷಕ ಶಿಕ್ಷಣ ಸಂಸ್ಥೆಗಳಲ್ಲಿ ನಾಯಕತ್ವದ, ಬೋಧಕ ವರ್ಗದ ಮತ್ತು ಭೌತಿಕ ಸೌಲಭ್ಯಗಳ ಗುಣಮಟ್ಟವನ್ನು ನೋಡಿಕೊಳ್ಳುವುದರಲ್ಲಿ ವಿಶ್ವವಿದ್ಯಾಲಯಗಳ ಪಾತ್ರವು ಮುಖ್ಯವಾದುದು. ಪ್ರತಿ ಶಿಕ್ಷಕ ಶಿಕ್ಷಣ ಸಂಸ್ಥೆಯನ್ನೂ ಶಾಲೆಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಜೊತೆ ಸೂಕ್ತ ರೀತಿಯಲ್ಲಿ ಒಂದುಗೂಡಿಸುವ ಅಗತ್ಯವಿದೆ. ಸಂಸ್ಥೆಗಳಿಗೆ ಒಂದೆಡೆ ಸೇರಲು, ಅನುಭವಗಳನ್ನು ಹಂಚಿಕೊಳ್ಳಲು ಮತ್ತು ಪರಸ್ಪರ ಸಹಯೋಗದಲ್ಲಿ ಕೆಲಸ ಮಾಡುವಂತಹ ಉಪಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಶೈಕ್ಷಣಿಕ ವೇದಿಕೆಗಳು ಅಥವಾ ಆನ್‌ಲೈನ್ ವೇದಿಕೆಗಳನ್ನು ಸೃಷ್ಟಿಸಬೇಕು.

ವಿಶ್ವವಿದ್ಯಾಲಯಗಳು, ಶಿಕ್ಷಣಶಾಸ್ತ್ರದಲ್ಲಿನ ಉನ್ನತ ಅಧ್ಯಯನ ಸಂಸ್ಥೆ(ಐಎಎಸ್‌ಇ)ಗಳು, ಸಿಟಿಇಗಳು ಮತ್ತು ಡಯಟ್‌ಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿಮಾಡುವುದರ ಜೊತೆಗೆ ರಾಜ್ಯ ಸರ್ಕಾರವು ಅಗತ್ಯವಾದ ಹಾಗೂ ಸಾಕಷ್ಟು ಪ್ರಮಾಣದ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ನೀತಿನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕಲ್ಲದೆ ಅಗತ್ಯ ಮಾನದಂಡಗಳನ್ನು ಹೊಂದಿಲ್ಲದ ಆದರೆ ಕೇವಲ ಲಾಭಗಳಿಸುವುದಕ್ಕಾಗಿಯೇ ಇರುವ ಸಂಸ್ಥೆಗಳನ್ನು ಮುಚ್ಚುವ ಕ್ರಮ ಕೈಗೊಳ್ಳಬೇಕು.

ಇಂತಹ ಸ್ಥಿರ ಮತ್ತು ದೃಢವಾದ ಕ್ರಮಗಳನ್ನು ತೆಗೆದುಕೊಂಡಾಗ ಮಾತ್ರ– 'ವಿಶ್ಲೇಷಣಾ ಮನೋಭಾವವನ್ನು ಹೊಂದಿರುವ ಸೃಜನಶೀಲ ವಿದ್ಯಾರ್ಥಿಗಳನ್ನು, ಹಾಗೆಯೇ ಭವಿಷ್ಯದ ವಯಸ್ಕರನ್ನು ತಯಾರು ಮಾಡುವಲ್ಲಿ ಇರುವ ಸವಾಲುಗಳನ್ನು ಎದುರಿಸಬೇಕಾದ ಭಾವಿ ಶಿಕ್ಷಕರ ಸಾಮರ್ಥ್ಯವನ್ನು ಶಿಕ್ಷಕ ಶಿಕ್ಷಣವು ಯಾವ ರೀತಿಯಲ್ಲಿ ಹೆಚ್ಚಿಸುತ್ತದೆ?' ಎಂಬ ಮುಖ್ಯವಾದ ಪ್ರಶ್ನೆಗೆ ಉತ್ತರ ನೀಡಬಹುದು.

ಬಿ ಫಸ್ಟ್, 26–09–2017

